# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,

## ಸಹಾಯಕ ಕಾರ್ಯಪಾಲಕ ಅಭಿಯಂತರರು, ಯಲಹಂಕ ಉಪ ವಿಭಾಗ

## ಚೌಡೇಶ್ವರಿ ವಾರ್ಡ್ ನಂ–02ರಲ್ಲಿ

## ದಿನಾಂಕ: 06–08–2022 ರಂದು ನಡೆದ ವಾರ್ಡ್ ಸಮಿತಿ ಸಭಾ ನಡವಳಿ.

ದಿನಾಂಕ: 06–08–2022 ರಂದು ಬೆಳಗ್ಗೆ 10.00 ಗಂಟೆಗೆ ಬಿ.ಬಿ.ಎಂ.ಪಿ ಯಲಹಂಕ ವಿಭಾಗದ ಕಛೇರಿಯಲ್ಲಿ ವಾರ್ಡ್ ನಂ–02ರ ವಾರ್ಡ್ ಸಮಿತಿಯ ಮಾನ್ಯ ನೋಡೆಲ್ ಅಧಿಕಾರಿಗಳು ಹಾಗೂ ಕಾರ್ಯದರ್ಶಿಗಳು ಜೊತೆ ನೆಡೆದ ವಾರ್ಡ್ ಕಮಟಿ ಸಭೆಯ ನಡವಳಿಗಳು.

| ಕ್ರ.ಸಂ | ಸಭೆಯಲ್ಲಿ ಭಾಗವಹಿಸಿದ ಅಧಿಕಾರಿ ಹೆಸರು | ಪದನಾಮ |
|---|---|---|
| 01 | ಶ್ರೀ.ಕೆ.ಎ. ಶಾಂತರಾಜ್ | ~~ಸಹಾಯಕ~~ ಉಪ ನಿರ್ದೇಶಕರು ಮತ್ತು ಹಾಗೂ ಬಿ.ಬಿ.ಎಂ.ಪಿ ನೋಡಲ್ ಅಧಿಕಾರಿಗಳು (ವಾರ್ಡ್ ನಂ–02) |
| 02 | ಶ್ರೀ.ನರಸಿಂಹಯ್ಯ | ಕಾರ್ಯದರ್ಶಿಗಳು ಮತ್ತು ಸಹಾಯಕ ಅಭಿಯಂತರರು (ವಾರ್ಡ್ ನಂ–02) |
| 03 | ಡಾ11 ಮಂಜುಳ ಎಸ್ | ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯ |
| 04 | ಶ್ರೀ.ಕೆ.ಎನ್. ಬಾಬುರೆಡ್ಡಿ | ಸಹಾಯಕ ಅಭಿಯಂತರರು (ವಿದ್ಯುತ್) |
| 05 | ಡಾ. ಲಕ್ಷ್ಮಿನಾರಾಯಣಸ್ವಾಮಿ | ಪಶುಸಂಗೋಪನೆ |
| 06 | ಡಾ. ಎಂ.ಹೆಚ್.ರೆಡ್ಡಿ | ಪಶುಸಂಗೋಪನೆ |
| 07 | ಶ್ರೀಮತಿ. ಸುನಂದಮ್ಮ | ಹಿರಿಯ ಆರೋಗ್ಯ ಪರಿವೀಕ್ಷಕರು |
| 08 | ರಾಮಲಿಂಗ | ವರ್ಕ್ ಇನ್ಸ್‌ಪೇಕ್ಟರ್ (ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 09 | ಶ್ರೀ. ಕುಮಾರಸ್ವಾಮಿ | ಜಾನುವಾರು ಅಧಿಕಾರಿಗಳು |
| 10 | ಶ್ರೀ.ಚಂದ್ರಶೇಖರ್ | ಕಂದಾಯ ಮೌಲ್ಯಮಾಪಕರು (ಯಲಹಂಕ) |
| 11 | ಶ್ರೀ.ಉದಯ ಕುಮಾರ್ | ಯಲಹಂಕ ಸಂಚಾರಿ ಪೋಲಿಸ್ |
| 12 | ಶ್ರೀಬೂತಯ್ಯ | ಹೆಡ್ ಕಾನ್ಸ್‌ಟೆಬಲ್ ಯಲಹಂಕ ಸಂಚಾರಿ ಠಾಣೆ |
| | ಬಡಾವಣೆ ಕ್ಷೇಮಾಭಿವೃದಿ ಸಂಘದ ಅಧ್ಯಕ್ಷರು/ಕಾರ್ಯದರ್ಶಿ/ಸದಸ್ಯರು/ಸಾರ್ವಜನಿಕರು | |
| 01 | ಶ್ರೀ.ಹೇಮರಾಜ್ | ಸ್ಥಳೀಯ ಮುಖಂಡರು |
| 02 | ಶ್ರೀ. ಅ.ಬ ಶಿವಕುಮಾರ್ | ಸ್ಥಳೀಯ ಮುಖಂಡರು |
| 03 | ಶ್ರೀ.ರಾಮರೆಡ್ಡಿ | ಸ್ಥಳೀಯ ನಿವಾಸಿಗಳು |

| | | |
|---|---|---|
| 04 | ಶ್ರೀ.ಎ.ಎಸ್.ರಾಜು | ಸ್ಥಳೀಯ ನಿವಾಸಿಗಳು |
| 05 | ಶ್ರೀ.ಶ್ರೀನಿವಾಸಲು | ಸ್ಥಳೀಯ ನಿವಾಸಿಗಳು |
| 06 | ಶ್ರೀ.ವೆಂಕಟೇಶ್ | ಮಾರುತಿನಗರ |
| 07 | ಹರಿನಾಥ | ಸಾರ್ವಜನಿಕರು |
| 08 | ಸುಚಿತ್ ಬಾಬು | ಸೈನಿಕ ವಿಹಾರ ಅಸೋಸಿಯೇಷನ್ ಕೆಂಚೇನಹಳ್ಳಿ |

ಶ್ರೀ.ನರಸಿಂಹಯ್ಯ ಸಹಾಯಕ ಅಭಿಯಂತರರು ಹಾಗೂ ಕಾರ್ಯದರ್ಶಿಗಳು ವಾರ್ಡ್ ನಂ-02 ರವರು ಸಭೆಗೆ ಹಾಜರಿದ್ದ ನೋಡೆಲ್ ಅಧಿಕಾರಿಗಳು ಹಾಗೂ ಬಾಗವಹಿಸಿದ್ದ ಎಲ್ಲಾ ಅಧಿಕಾರಿಗಳನ್ನು ಮತ್ತು ಸಾರ್ವಜನಿಕರ ಸಭೆಗೆ ಸ್ವಾಗತಿಸುತ್ತಾ ಸಭೆ ಪ್ರಾರಂಭಿಸಲು ನೋಡೆಲ್ ಅಧಿಕಾರಿರವರನ್ನು ಕೋರಲಾಯಿತು.

ಶ್ರೀ.ಕೆ.ಎ.ಶಾಂತರಾಜ್ ಸಮಿತಿಯ ನೋಡೆಲ್ ಅಧಿಕಾರಿಯವರು ಸಭೆಯನ್ನು ಪ್ರಾರಂಭಿಸಿ ಈ ಹಿಂದಿನ ಸಭೆಯಲ್ಲಿ ಅಂದರೆ ದಿನಾಂಕ: 16-07-2022 ರಂದು ನಡೆದ ಸಭೆಯಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ವಿವರಣೆ ಕೇಳಿದರು. ಹಾಗೂ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿ ಬರುವ ಎಲ್ಲಾ ಅಧಿಕಾರಿಗಳಿಗೆ ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಸಭೆಯಲ್ಲಿ ಸೂಚಿಸಿದರು. ಹಾಗೂ ಈ ಹಿಂದೆ ಕೈಗೊಂಡಿರುವ ಸಭೆಯ ನಡವಳಿಗಳನ್ನು ಸಭೆಯಲ್ಲಿ ವರದಿಯನ್ನು ಒದಲಾಯಿತು.

| ಕ್ರ.ಸಂ | ವಿಷಯ ಸೂಚಿ | ನಿರ್ಣಯ | ಕ್ರಮ ತೆಗೆದುಕೊಳ್ಳಬೇಕಾದ ಅಧಿಕಾರಿ |
|---|---|---|---|
| 01 | ವಾರ್ಡ್ ನಂ-02ರ ವ್ಯಾಪ್ತಿಯಲ್ಲಿ ಹಂದಿಗಳ ಬಗ್ಗೆ ಈ ಹಿಂದಿನ ಸಭೆಯಲ್ಲಿ ಶ್ರೀ.ಹರಿನಾಥನ್ ಮತ್ತು ಶ್ರೀ.ಎ.ಎಸ್.ರಾಜು ರವರು ಸಭೆಯಲ್ಲಿ ದೂರನ್ನು ಸಲ್ಲಿಸಿದ್ದು, ಅದರಂತೆ ದಿನಾಂಕ: 06-08-2022 ರಂದು ನಡೆದ ಸಭೆಗೆ ಯಲಹಂಕ ವಿಭಾಗಕ್ಕೆ ಸಂಬಂಧಿಸಿದ ಡಾ.ಶ್ರೀ.ಲಕ್ಷ್ಮಿನಾರಾಯಣಸ್ವಾಮಿ ಮತ್ತು ಡಾ.ಶ್ರೀ.ಎಂ.ಹೆಚ್.ರೆಡ್ಡಿ ರವರು ಪಶುಸಂಗೋಪನಾ ಅಧಿಕಾರಿಗಳು ಹಾಜರಾಗಿ ನಮ್ಮಗಳ ಕಾರ್ಯವ್ಯಾಪ್ತಿಗೆ ನಾಯಿಗಳ ಸಂತಾನ ಹರಣ ಮತ್ತು ಮಾಂಸದ ಅಂಗಡಿಗಳ ಬಗ್ಗೆ ಕ್ರಮ ಕೈಗೊಳ್ಳುವ ಕೆಲಸ ನಿರ್ವಹಿಸುತ್ತಿದ್ದು, ಹಂದಿಗಳ ಸಾಕಣಿಕೆ ಬಗ್ಗೆ ಈಗಾಗಲೇ ದಾವಣಗೆರೆಯ ಜಿಲ್ಲೆಯಲ್ಲಿ ಕೋರ್ಟ್‌ನಲ್ಲಿ ದಾವೆ ಭಾಕಿ ಇರುವುದಾಗಿ ತಿಳಿಸಿದರು ಮತ್ತು ಇದಕ್ಕೆ ಸಂಬಂಧಿಸಿದಂತೆ ಹಂದಿಗಳು ಸಾಕುವ ಮಾಲೀಕರಿಗೆ ರಸ್ತೆಗಳಿಗೆ ಹಂದಿಗಳನ್ನು ಬಿಡದೇ ಸೂಕ್ತ ಕ್ರಮ ಕೈಗೊಳ್ಳಬೇಕೆಂದು ಸಭೆಗೆ ವಿವರಣೆ ನೀಡಿದರು. | ಸದರಿ ವಿಷಯಕ್ಕೆ ಸಂಬಂದಿಸಿದಂತೆ ಸಭೆಯಲ್ಲಿ ಹಾಜರಿದ್ದ ಜಾನುವಾರು ಅಧಿಕಾರಿಗಳು ಸೂಕ್ತ ವರದಿ ನೀಡಿರುವುದರಿಂದ ಹಂದಿಗಳನ್ನು ಸಾಕುವ ಮಾಲೀಕರಿಗೆ ಹಂದಿಗಳನ್ನು ರಸ್ತೆಗೆ ಬಿಡದೇ ಸೂಕ್ತ ಕ್ರಮ ತೆಗೆದುಕೊಳ್ಳಬೇಕೆಂದು ತಿಳಿಸಲಾಗುವುದೆಂದು ಸಭೆಯಲ್ಲಿ ನೋಡಲ್ ಅಧಿಕಾರಿಗಳು ತಿಳಿಸಿದರು. | ಸಹಾಯಕ ನಿರ್ದೇಶಕರು ಪಶುಸಂಗೋಪನಾ ವಿಭಾಗ ಬಿ.ಬಿಎಂ.ಪಿ |

| | | | |
|---|---|---|---|
| 02 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಚೌಡೇಶ್ವರಿ ಕಲ್ಯಾಣ ಮಂಟಪದಿಂದ ಕೊಂಡಪ್ಪ ಬಡಾವಣೆಯುವರೆಗೆ ರಾಜಕಾಲುವೆಯಲ್ಲಿ ತುಂಬಿರುವ ಹೂಳನ್ನು ತೆಗೆಯುವಂತೆ ಸ್ಥಳೀಯ ನಿವಾಸಿಗಳಾದ ಶ್ರೀ.ಎ.ಎಸ್. ರಾಜು ರವರು ಈ ಹಿಂದಿನ ಸಭೆಯಲ್ಲಿ ಕೋರಿದ್ದು, ಇದಕ್ಕೆ ಸಂಬಂಧಿಸಿದಂತೆ ಸೂಕ್ತ ಕ್ರಮ ಕೈಗೊಂಡಿರುವುದಿಲ್ಲ ಎಂಬುದಾಗಿ ಮತ್ತೊಮ್ಮೆ ಸಭೆಗೆ ಮನವಿ ಸಲ್ಲಿಸಿದರು. | ಇದಕ್ಕೆ ಸಂಬಂಧಿಸಿದಂತೆ ನೊಡ್‌ಲ್ ಅಧಿಕಾರಿಗಳು ಮಾತನಾಡಿ ರಾಜಕಾಲುವೆ ವಿಭಾಗಕ್ಕೆ ಸಹಾಯಕ ಕಾರ್ಯಪಾಲಕ ಅಭಿಯಂತರರಿಗೆ ಪತ್ರ ಬರೆದು ತಿಳಿಸಲಾಗುವುದೆಂದು ಸಭೆಯಲ್ಲಿ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ರಾಜಕಾಲುವೆ ವಿಭಾಗ ಬಿ.ಬಿಎಂ.ಪಿ |
| 03 | ಚೌಡೇಶ್ವರಿ ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಪ್ರದೇಶಗಳಲ್ಲಿ ಕಾವೇರಿ ನೀರು ಪೂರೈಕೆ ಮಾಡಲು ನಿಖರವಾದ ಶುಲ್ಕವನ್ನು ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯುವರು ತಿಳಿಸದೇ ಇರುವ ಬಗ್ಗೆ ಹಾಗೂ ಗುಡಿ ಕೈಗಾರಿಕೆ ಎಂದು ರಾಜ್ಯ ಸರ್ಕಾರದಿಂದ ಸಾಲ ನೀಡಿದ್ದು, ಇದಕ್ಕೆ ಸಂಬಂದಿಸಿದಂತೆ ಬಿ.ಡಬ್ಲ್ಯೂ.ಎಸ್.ಎಸ್.ಬಿ ಅಧಿಕಾರಿಗಳು ವಾಣಿಜ್ಯ (ಕಮರ್ಷಿಯಲ್) ರೀತಿಯಲ್ಲಿ ಶುಲ್ಕ ವಿಧಿಸುತಿರುವ ಬಗ್ಗೆ ಸ್ಥಳೀಯ ನಿವಾಸಿಗಳಾದ ಶ್ರೀ. ಎ.ಎಸ್.ರಾಜು ರವರು ಅಕ್ಷಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂಧಿಸಿದಂತೆ ನೊಡ್‌ಲ್ ಅಧಿಕಾರಿಗಳು ಮಾತನಾಡಿ ಮುಂದಿನ ಸಭೆಗೆ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಹಾಜರಾಗಿ ಸಾರ್ವಜನಿಕರ ಪ್ರಶ್ನೆಗೆ ಉತ್ತರ ನೀಡುವಂತೆ ಸಭೆಯಲ್ಲಿ ಹಾಜರಿದ್ದ ವರ್ಕ್ ಇನ್ಸ್‌ಪೇಕ್ಟರ್ ರವರಿಗೆ ತಿಳಿಸಿದರು. | ವಿನಯ ಕುಮಾರ್ ಸಹಾಯಕ ಅಭಿಯಂತರರು ಬಿ.ಡಬ್ಲ್ಯೂ.ಎಸ್.ಎಸ್.ಬಿ |
| 04 | ವಾರ್ಡ್ ನಂ-02ರ ವ್ಯಾಪ್ತಿಯಲ್ಲಿರುವ ಕೊಂಡಪ್ಪ ಬಡಾವಣೆಯಲ್ಲಿನ ಕೆರೆ ಪಕ್ಕದಲ್ಲಿರುವ ರಾಜಕಾಲುವೆಯಲ್ಲಿ ಕಸವನ್ನು ಸುರಿದಿರುವ ಬಗ್ಗೆ ಶ್ರೀ.ಹರಿನಾಥನ್ ರವರು ಅಕ್ಷೇಪಣೆ ವ್ಯಕ್ತಪಡಿಸಿದರು. | ಇದಕ್ಕೆ ಸಂಬಂದಿಸಿದಂತೆ ಹಿರಿಯ ಆರೋಗ್ಯ ಪರಿವೀಕ್ಷಕರಿಗೆ ದೂರವಾಣಿ ಮೂಲಕ ಸಂಪರ್ಕಿಸಿ ಕೂಡಲೇ ಘನತ್ಯಾಜ್ಯ ವಿಲೇವಾರಿ ಕೆಲಸವನ್ನು ಸಮರ್ಪಕವಾಗಿ ನಿರ್ವಹಣೆ ಮಾಡುವಂತೆ ನೊಡಲ್ ಅಧಿಕಾರಿಗಳು ತಿಳಿಸಿದರು | ಸಹಾಯಕ ಕಾರ್ಯಪಾಲಕ ಅಭಿಯಂತರರು ಎಸ್.ಡಬ್ಲ್ಯೂ.ಎಂ |
| 05 | ವಾರ್ಡ್ ನಂ-02ರ ವ್ಯಾಪ್ತಿಯಲ್ಲಿನ ಕೆಲವು ಕಡೆ ವಿದ್ಯುತ್ ಕಂಭಗಳು ಬಿಳುವ ಸ್ಥೀತಿಯಲ್ಲಿದ್ದು, ಕೂಡಲೇ ಸರಿಪಡಿಸಲು ಮತ್ತು ಕುಡಿಯುವ ಕೊಳವೆ ಭಾವಿಗಳ ಹತ್ತಿರ ಸ್ವಿಚ್ ಬೋರ್ಡ್‌ಗಳಲ್ಲಿ ವಿದ್ಯುತ್ ಲಿಕೇಜ್ ಉಂಟಾಗುತ್ತಿದ್ದು, ಇದರಿಂದ ಮೂಕ ಪ್ರಾಣಿಗಳಾದ ಹಸು ಮತ್ತು ನಾಯಿಗಳಿಗೆ ಪ್ರಾಣ ಹಾನಿ ಉಂಟಾಗುತ್ತಿದ್ದು, ಇದರ ಬಗ್ಗೆ ಸೂಕ್ತ ಕ್ರಮ ವಹಿಸುವಂತೆ ಸಭೆಯಲ್ಲಿ ಸಾರ್ವಜನಿಕರು ಕೋರಿದರು . | ಇದಕ್ಕೆ ಸಂಬಂದಿಸಿದಂತೆ ನೊಡಲ್ ಅಧಿಕಾರಿಗಳು ಮಾತನಾಡಿ ಬೇಸ್ಕಾಂ ಇಲಾಖೆ ಅಧಿಕಾರಿಗಳಿಗೆ ಸೂಚಿಸಲು ಸಂಬಂದಿಸಿದ ವಾರ್ಡ್ ಅಭಿಯಂತರರಿಗೆ ತಿಳಿಸಿದರು. | ಸಹಾಯಕ ಕಾರ್ಯಪಾಲಕ ಅಭಿಯಂತರರು ಬೇಸ್ಕಾಂ ಇಲಾಖೆ |

| | | | |
|---|---|---|---|
| 06 | ಯಲಹಂಕ ಕೊಂಡಪ್ಪ ಬಡಾವಣೆಯಲ್ಲಿರುವ 27ನೇ ಅಡ್ಡರಸ್ತೆಯಲ್ಲಿ ಮತ್ತು ಮಾರಮ್ಮ ಬಂಡೆ ಹತ್ತಿರ ಸುಮಾರು 150 ಮೀಟರ್ ರಸ್ತೆ ಮತ್ತು ಚರಂಡಿ ಅಭಿವೃದ್ಧಿಪಡಿಸಿಕೊಡುವಂತೆ ಸಭೆಯಲ್ಲಿ ಕೊಂಡಪ್ಪ ಬಡಾವಣೆ ಸಾರ್ವಜನಿಕರು ಸಭೆಗೆ ಕೋರಿದರು. | ಇದಕ್ಕೆ ಸಂಬಂದಿಸಿದಂತೆ ನೋಡಲ್ ಅಧಿಕಾರಿಗಳು ಮಾತನಾಡಿ ಹಾಲಿ 2022–23ನೇ ಸಾಲಿನ ಕ್ರೀಯಾ ಯೋಜನೆಯಲ್ಲಿ ಕಾಮಗಾರಿಯನ್ನು ಕೈಗೊಂಡು ನಿರ್ವಹಿಸುವುದಾಗಿ ತಿಳಿಸಿದರು. | ಸಹಾಯಕ ಅಭಿಯಂತರರು ವಾರ್ಡ್ –2 |

ಈ ಮೇಲ್ಕಂಡ ಎಲ್ಲಾ ಅಂಶಗಳನ್ನು ಕೂಲಂಕುಷವಾಗಿ ಚರ್ಚಿಸಲಾಯಿತು, ಹಾಗೂ ಸಭೆಯಲ್ಲಿ ಹಾಜರಿದ್ದ ಎಲ್ಲಾ ಸದಸ್ಯರಿಗೆ ಹಾಗೂ ಅಧಿಕಾರಿಗಳಿಗೆ ವಂದನೆಗಳನ್ನು ಸಲ್ಲಿಸಿ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಶ್ರೀ.ನರಸಿಂಹಯ್ಯ AE-02
ಸಹಾಯಕ ಅಭಿಯಂತರರು

ಶ್ರೀ.ಕೆ.ಎ.ಶಾಂತರಾಜ್
ಉಪ ನಿರ್ದೇಶಕರು ಹಾಗೂ
ನೋಡೆಲ್ ಅಧಿಕಾರಿಗಳು ವಾರ್ಡ್ ನಂ–02.

ಪ್ರತಿಯನ್ನು:

1. ಮಾನ್ಯ ಜಂಟಿ ಆಯುಕ್ತರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು ಯಲಹಂಕ ವಲಯರವರ ಆಪ್ತ ಶಾಖೆಗೆ ಕಳುಹಿಸಿದೆ.
3. ಆರೋಗ್ಯ ವೈದ್ಯಾಧಿಕಾರಿಗಳು ಯಲಹಂಕ ವಲಯರವರಿಗೆ ಕಳುಹಿಸಿದೆ.
4. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ (ವಿದ್ಯುತ್) ಯಲಹಂಕ ವಲಯ ಸೂಕ್ತ ಕ್ರಮಕ್ಕಾಗಿ.
5. ಸಹಾಯಕ ಕಾರ್ಯಪಾಲಕ ಅಭಿಯಂತರರು, ಘನತ್ಯಾಜ್ಯ ನಿರ್ವಹಣೆ ಯಲಹಂಕ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
6. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ/ ಬಿ.ಡಬ್ಲ್ಯೂ.ಎಸ್.ಎಸ್.ಬಿ ಯಲಹಂಕ ಉಪ ವಿಭಾಗರವರ ಸೂಕ್ತ ಕ್ರಮಕ್ಕಾಗಿ.
7. ಕಛೇರಿ ಕಡತಕ್ಕೆ.